ವಿಜಯವಾಣಿ
ಕನ್ನಡಿಗರ ಧ್ವನಿ

## ವಿಶ್ವವಿದ್ಯಾಲಯ ಕ್ರಿಕೆಟ್

# ಉಪಾಂತ್ಯಕ್ಕೆ ಜೈನ್ ವಿವಿ



ಕೌನೇನ್ ಅಬ್ಬಾಸ್

**ಬೆಂಗಳೂರು:** ನಾಯಕ ಕೌನೇನ್ ಅಬ್ಬಾಸ್ (44* ರನ್, 47 ಎಸೆತ, 4 ಬೌಂಡರಿ, 2 ಸಿಕ್ಸರ್) ಜವಾಬ್ದಾರಿಯುತ ಬ್ಯಾಟಿಂಗ್ ಹಾಗೂ ಶ್ರೇಯಸ್ ಗೋಪಾಲ್ (12ಕ್ಕೆ 3) ಭರ್ಜರಿ ಬೌಲಿಂಗ್ ದಾಳಿಯ ನೆರವಿನಿಂದ ಜೈನ್ ವಿವಿ ಟೊಯೋಟಾ ವಿಶ್ವವಿದ್ಯಾಲಯ ಕ್ರಿಕೆಟ್ ಟೂರ್ನಿಯ ಅಂತಿಮ ಲೀಗ್ ಪಂದ್ಯದಲ್ಲಿ ಆಲಿಗಢ ಮುಸ್ಲಿಂ ವಿವಿ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿ ಉಪಾಂತ್ಯಕ್ಕೇರಿದೆ. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಆಲಿಗಢ ವಿವಿ, ಜೈನ್ ತಂಡದ ಬಿಗು ದಾಳಿಗೆ ಬೆದರಿ 9 ವಿಕೆಟ್‌ಗೆ ಕೇವಲ 105 ರನ್‌ಗಳಿಸಲಷ್ಟೇ ಶಕ್ತವಾಯಿತು. ಇದನ್ನು ಬೆನ್ನಟ್ಟಿದ ಜೈನ್ ತಂಡ 18.4 ಓವರ್‌ಗಳಲ್ಲಿ 5 ವಿಕೆಟ್‌ಗೆ 106 ರನ್‌ಗಳಿಸಿ ಗೆಲುವು ದಾಖಲಿಸಿತು. ನಾಯಕ ಅಬ್ಬಾಸ್ ಅಲ್ಲದೆ, ಸಮರ್ಥ್ ರವಿಕುಮಾರ್ (25) ಹಾಗೂ ಶ್ರೇಯಸ್ ಗೋಪಾಲ್ (19) ಎರಡಂಕಿ ಮೊತ್ತ ದಾಖಲಿಸಿದರು. ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಆಲಿಗಢ ವಿವಿ ಪರ ವಿಕೆಟ್ ಕೀಪರ್ ಯಾಸೀಂ ಕಲೀಂ (30) ಗರಿಷ್ಠ ರನ್ ಗಳಿಸಿದರು.

**ಆಲಿಗಢ ವಿವಿ 9 ವಿಕೆಟ್‌ಗೆ 105** (ಯಾಸಿಂ ಕಲೀಂ 30, ವಿಪಿನ್ 17*, ಶ್ರೇಯಸ್ ಗೋಪಾಲ್ 12ಕ್ಕೆ 3, ಡೇನಿಯಲ್ 19ಕ್ಕೆ 2). **ಜೈನ್ ವಿವಿ 18.4 ಓವರ್‌ಗಳಲ್ಲಿ 5 ವಿಕೆಟ್‌ಗೆ 106** (ಅಬ್ಬಾಸ್ 44*, ಸಮರ್ಥ್ ಆರ್ 25, ರೋಹಿತ್ ಸೈನಿ 18ಕ್ಕೆ 2).